ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ:ಎಂ6/ಅದಾ/ಅಕೋ.ಅನುಪಯುಕ್ತ ವಸ್ತು/29/13-14 ದಿನಾಂಕ:15-7-2013

**ಸುತ್ತೋಲೆ**

ವಿಷಯ : ಶಾಲೆಗಳಲ್ಲಿರುವ ಅಡುಗೆ ಮನೆಯಲ್ಲಿರುವ ಅನುಪಯುಕ್ತ ವಸ್ತುಗಳನ್ನು ದಾಸ್ತಾನಿನಿಂದ ತೆಗೆದುಹಾಕುವ ಬಗ್ಗೆ.

ಉಲ್ಲೇಖ : ಅಧಿಕಾರಿಗಳ ಭೇಟಿ/ತಪಾಸಣೆ ವೇಳೆಯಲ್ಲಿ ಗಮನಿಸಿದಂತೆ.
2. ಜಿಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಇವರು ಮಾಸಿಕ ಸಭೆಗಳಲ್ಲಿ ಮಾಡಿದ ಮನವಿಗಳ ಮೇಲೆ.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಶಾಲೆಗಳ ಅಡುಗೆಮನೆಗಳಲ್ಲಿ ಅನೇಕ ಅನುಪಯುಕ್ತ ಅಡುಗೆ ತಯಾರಿಕಾ ಸಾಮಗ್ರಿಗಳು, ಹಾಳಾದ ಸ್ಟೌವ್‌ಗಳು, ಸಿಲಿಂಡರ್ ಗ್ಯಾಸ್ ಪೈಪ್‌ಗಳು, ಬರ್ನಲ್‌ಗಳು, ನೀರಿನ ಡ್ರಂಗಳು, ಹಾಳಾಗಿರುವ ಡಬರಿ, ಅನ್ನ ಬಡಿಸುವ ಪಾತ್ರೆಗಳು, ಗ್ರೈಂಡರ್‌ಗಳು, ನೀರಿನ ಫಿಲ್ಟರ್‌ಗಳು, ತೂಕದ ಯಂತ್ರಗಳು, ಡಬ್ಬಗಳು, ಆಹಾರ ಧಾನ್ಯ ಸ್ವಚ್ಛತೆಗೆ ಬಳಸಲಾದ ಪರಿಕರಗಳು, ರಟ್ಟಿನ ಬಾಕ್ಸ್‌ಗಳು ಇತ್ಯಾದಿ ಅನುಪಯುಕ್ತವಾಗಿದ್ದರೂ ಅವುಗಳನ್ನು ಶಾಲಾ ಅಡುಗೆಮನೆಯಲ್ಲಿ, ನೀರಿನ ತೊಟ್ಟಿಗಳ ಮೇಲೆ ಇಡಲಾಗಿದೆ. ಇದರಿಂದಾಗಿ ಅಡುಗೆ ಮನೆಯಲ್ಲಿ ಜಾಗದ ಕೊರತೆಯಾಗುವುದಲ್ಲದೆ ಅದರಲ್ಲಿ ಹಲ್ಲಿ, ಚೇಳು ಹಾಗೂ ಇತರೆ ಹುಳುಗಳು ವಾಸ ಮಾಡಲು ಅವಕಾಶವಾಗಿದ್ದು, ಅಡುಗೆ ಮಾಡುವಾಗ ಅಡುಗೆಯಲ್ಲಿ ಬಿದ್ದಿರುವ ಪ್ರಕರಣಗಳು ವರದಿಯಾಗುತ್ತಲಿವೆ. ಇವುಗಳು ಅನುಪಯುಕ್ತವಾಗಿದ್ದು, ಉಪಯೋಗಿಸಲು ಬಾರದಿರುವುದರಿಂದ ಅವುಗಳನ್ನು ಶಾಲಾ ಅಡುಗೆ ದಾಸ್ತಾನಿನಿಂದ ಹೊರತೆಗೆದು ವಿಲೇವಾರಿ ಮಾಡಬೇಕಾಗಿದೆ. ಈ ಉದ್ದೇಶಕ್ಕಾಗಿ ಈ ಕೆಳಕಂಡ ಷರತ್ತುಗಳನ್ವಯ ಅವುಗಳನ್ನು ಶಾಲಾ ಅಡುಗೆ ದಾಸ್ತಾನಿನಿಂದ ತೆಗೆಯಲು ಅನುಮತಿ ನೀಡಿದೆ.

1. ಅನುಪಯುಕ್ತ ವಸ್ತುಗಳನ್ನು ಮುಖ್ಯ ಶಿಕ್ಷಕರು, ಹಿರಿಯ ಶಿಕ್ಷಕರು ಹಾಗೂ ಮುಖ್ಯ ಅಡುಗೆಯವರು ಸೇರಿ ಈ ಕೆಳಕಂಡ ನಮೂನೆಯಲ್ಲಿ ಪಟ್ಟಿ ತಯಾರಿಸಿ ಅವುಗಳು ಹಾಳಾಗಿದ್ದು ಅನುಪಯುಕ್ತವಾಗಿವೆ ಎಂದು ದೃಢೀಕರಿಸಬೇಕು.

**ನಮೂನೆ**

| ಕ್ರ ಸಂ | ವಸ್ತುವಿನ ಹೆಸರು | ದಾನದ ಪಡೆದ ಅಥವಾ ಖರೀದಿಸಿದ ದಿನಾಂಕ | ವಸ್ತುವಿನ ಮೌಲ್ಯ | ದಾಸ್ತಾನು ಪುಸ್ತಕ ಪುಟ ಸಂಖ್ಯೆ | ಪ್ರಸ್ತುತ ವಸ್ತುವಿನ ಸ್ಥಿತಿ | ಷರಾ |
|---|---|---|---|---|---|---|
| | | | | | | |

ಈ ಪಟ್ಟಿಯನ್ನು ಎಸ್.ಡಿ.ಎಂ.ಸಿ.ಯಲ್ಲಿಟ್ಟು ಅನುಮೋದನೆ ಪಡೆಯಬೇಕು. ಎಸ್.ಡಿ.ಎಂ.ಸಿ. ಸಭೆಯಲ್ಲಿ ಈ ಕುರಿತು ಚರ್ಚಿಸಿ, ವಸ್ತುಗಳ ವಿವರಗಳನ್ನು ನಿರ್ಣಯದಲ್ಲಿ ದಾಖಲಿಸಿ, ಅವುಗಳು ಅನುಪಯುಕ್ತವಾಗಿದ್ದು ದಾಸ್ತಾನಿನಿಂದ ತೆಗೆದು ಹಾಕುವ ಬಗ್ಗೆ ಸ್ಪಷ್ಟ ನಿರ್ಣಯ ದಾಖಲಿಸಬೇಕು.

2. ನಿರ್ಣಯಿಸಿದ ನಂತರ ಈ ವಸ್ತುಗಳನ್ನು ಹರಾಜು ಮಾಡಿ ಬಂದ ಹಣವನ್ನು ಮಧ್ಯಾಹ್ನ ಉಪಹಾರ ಯೋಜನೆ ಶಾಲಾ ಲೆಕ್ಕಕ್ಕೆ ಜಮಾ ಮಾಡುವುದು. ಈ ಹಣದಿಂದ ಯೋಜನೆಯ ಅನುಷ್ಠಾನಕ್ಕೆ ಬಳಸಬಹುದಾದ ಪರಿಕರಗಳನ್ನು ನಿಯಮಾನುಸಾರ ಖರೀದಿಸುವುದು.

(ಮೊಹಮ್ಮದ್ ಮೊಹಸಿನ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಪ್ರತಿಯನ್ನು :**

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ), ಜಿಲ್ಲಾ ಪಂಚಾಯತ್ ಕಛೇರಿ, ರವರಿಗೆ ಮುಂದಿನ ಕ್ರಮಕ್ಕಾಗಿ.
4. ಸಹಾಯಕ ನಿರ್ದೇಶಕರು(ಅ.ದಾ) ತಾಲ್ಲೂಕು ಪಂಚಾಯತ್ ರವರಿಗೆ ಮುಂದಿನ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

D:\AD\M6\2013\M6.doc